**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.**

ಸಿಸಿ ನಂ. 574/2018

| ಫಿರ್ಯಾದಿ | | ಆರೋಪಿ |
|---|---|---|
| ಕೃಷ್ಣ ಪುರುಷೋತ್ತಮ ಗಾವಡಿ | ವಿರುದ್ಧ | ಮಂಜುನಾಥ ಸುಕ್ರು ಹರಿಕಂತ್ರ |

ಮೃತ ವಾರಸುದಾರರು

ಅ) ಪುರುಷೋತ್ತಮ ಜಾನು ಗಾವಡಿ
62 ವರ್ಷ, ಕೂಲಿ, ಅಳ್ವೆಕೋಡಿ, ಕುಮಟಾ .

ಆ) ಗೀತಾ ಪುರಷೋತ್ತಮ ಗಾವಡಿ
57 ವರ್ಷ, ಮನೆ ವಾರ್ತೆ, ಅಳ್ವೇಕೋಡಿ, ಕುಮಟಾ .

ಆರೋಪಿಃ

ಮಂಜುನಾಥ ಸುಕ್ರು ನಾಯ್ಕು ,
30 ವರ್ಷ, ಮೀನುಗಾರಿಕೆ, ಸಾಃ ಬಂದರರೋಡ, ಶಶಿಹಿತ್ಲ ,
ಕುಮಟಾ.

**– ದಂಡ ಪ್ರಕ್ರಿಯಾ ಸಂಹಿತೆ ಕಲಂ.251 ರಡಿ ಆಪಾದನೆ –**

ನೀವು 2014 ನೇ ಇಸವಿ ಎಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ ಫಿರ್ಯಾದುದಾರರಿಂದ ನಿಮ್ಮ ಕುಟುಂಬದ ಖರ್ಚಿನ ಸಲುವಾಗಿ ಜರೂರಾಗಿ ರೂ. 1,50,000/- ಗಳನ್ನು ಪಡೆದಿದ್ದು ಸದ್ರಿ ಹಣವನ್ನು ಆರು ತಿಂಗಳು ಬಿಟ್ಟು ಕೊಡುತ್ತೇನೆ ಎಂದು ಭರವಸೆಯನ್ನು ನೀಡಿದ್ದು , 6 ತಿಂಗಳು ಕಳೆದರೂ ಸದ್ರಿ ಹಣ ನೀಡದೇ , ಸದರಿ ಹಣದ ಮರು ಪಾವತಿ ಸಲುವಾಗಿ ನೀವು ದಿಃ 18-04-2018 ರಂದು ನಿಮ್ಮ ಖಾತೆ ಇರುವ ಕಾರ್ಪೋರೇಶನ್ ಬ್ಯಾಂಕ ಕುಮಟಾ ಶಾಖೆ , ಇದರ ಚೆಕ್ ನಂ. 565104 ನೇದರ ರೂ. 1,50,000/- ನೀಡಿದ್ದು, ಸದರಿ ಚೆಕ್ ನ್ನು ಕುಮಟಾ ಶಾಖೆಯ ಯೂನಿಯನ್ ಬ್ಯಾಂಕ್ ಆಪ್ ಇಂಡಿಯಾಗೆ ನಗದೀಕರಣಕ್ಕಾಗಿ ಹಾಜರು ಪಡಿಸಿದಾಗ ದಿಃ 25-04-2018 ರಂದು ಸಾಕಷ್ಟು ಹಣ ಜಮಾ ಇಲ್ಲ ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು , ಈ ಕುರಿತು ನಿಮಗೆ ದಿಃ 08-05-2018 ರಂದು ವಕೀಲರ ಮುಖಾಂತರ ನೋಂದಾಯಿತ ಅಂಚೆ ನೋಟಿಸು ನೀಡಿದ್ದು, ಸದರಿ ನೋಟಿಸು ನಿಮಗೆ ದಿಃ 09-05-2018 ರಂದು ಜಾರಿಯಾಗಿದ್ದರೂ ಸಹ ನೀವು ಚೆಕ್ ನಲ್ಲಿ ಹೇಳಿರುವ ಹಣವನ್ನು ಫಿರ್ಯಾದುದಾರರಿಗೆ ವಾಪಸ್ಸು ಕೊಡದೇ ಕಲಂ 138

ಎನ್ ಐ ಆ್ಯಕ್ಟ ನೇದರ ಪ್ರಕಾರ ಅಪರಾಧ ಮಾಡಿರುತ್ತೀರೆಂದು ನಿಮ್ಮ ಮೇಲೆ ಆಪಾದನೆ ಇದೆ, ಅದಕ್ಕೆ ಏನು ಹೇಳುತ್ತೀರಿ?

**ಪ್ರಶ್ನೆ – 1** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ –

**ಪ್ರಶ್ನೆ – 2** ನಿಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ಪ್ರತಿ ರಕ್ಷೆ ಇದೆಯೆ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 12-03-2024.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ